780

ಮೈಸೂರ ಗಜೆಟ್ಟ.

ನಂ. 46 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1890.

ಬೆಂಗಳೂರು, ಶನಿವಾರ, ನವೆಂಬರ್ ತಾ|| 22, ಸನ್ 1890.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪೆಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯುಟೆ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸ್‌ಗಳು.

3ನೇ ಭಾಗ–ಶ್ರೀಮೆ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇಷ್ಸ್‌ಗಳು—ಯಿಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಯಿಲ್ಲ.

1ನೇ ಭಾಗ.

ಶ್ರೀಮೆ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 11ನೇ ನವೆಂಬರ್ 1890.

ಕ್ಯಾಂಪ್ ನಂ. 464.—ಮೈಸೂರು, ಹಾಸನ, ಕಡೂರು ಡಿಸ್ಟ್ರಿಕ್ಟ್‌ಗಳ ಮಾರ್ಗವಾಗಿ ಇನ್‌ಸ್ಪೆಕ್ಷ್ಯಾನೆ ಪರಾಮರಿಕ್ಕೇ ಬಗ್ಗೆ ಶ್ರೀಮೆ ಮಹಾರಾಜ ರಾಜಾಸಾಹೆಬ್ ಬಹದೂರವರ ಉದ್ದೇಶಿಸಲ್ಪಟ್ಟ ಸರ್ಕೀಟ್ ಸವಾರಿಯ ಇದರಡೀ ಕಂಡ ಮಜಲ್‌ವಾರ್ ಪಟ್ಟಿಯು ಸರ್ವರ ತಿಳುವಳಿಕ್ಕೇ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತೆ;—

ತಾರೀಖು.	ನವೆಂಬರ್ 1890.	
25ನೇ ಮಂಗಳವಾರ	.. ..	ಪ್ರಾತಃಕಾಲ ಎಡತೊರೆ ಸಾಯಂಕಾಲ ಹೊಳೇನರಸೀಪುರ
26ನೇ ಬುಧವಾರ	.. ..	ನರಸೀಪುರ ಮೊಕ್ಕಾಂ
27ನೇ ಗುರುವಾರ	.. ..	ಹಾಸನ
28ನೇ ಶುಕ್ರವಾರ	.. ..	ಮೊಕ್ಕಾಂ
29ನೇ ಶನಿವಾರ	.. ..	
30ನೇ ಭಾನುವಾರ	.. ..	ಸಕಲೇಶಪುರ

ಡಿಸಂಬರ 1890.

1ನೇ	ಸೋಮವಾರ	..	ಮೊಕ್ಕಾಂ
2ನೇ	ಮಂಗಳವಾರ	..	ಮಾರ್ಹಳ್ಳಿ
3ನೇ	ಬುಧವಾರ	..	ಆಜೂಬಾಜೂದಲ್ಲಿರುವ ಎಸ್ಟೇಟ್‌ಗಳ ಇನ್‌ಸ್ಪೆಕ್ಷನ್
4ನೇ	ಗುರುವಾರ	..	
5ನೇ	ಶುಕ್ರವಾರ	..	
6ನೇ	ಶನಿವಾರ	..	
7ನೇ	ಭಾನುವಾರ	..	
8ನೇ	ಸೋಮವಾರ	..	ಮುದಿಗೆರೆ
9ನೇ	ಮಂಗಳವಾರ	..	ಮೊಕ್ಕಾಂ
10ನೇ	ಬುಧವಾರ	..	ಕೊಟಗೆಹರ
11ನೇ	ಗುರುವಾರ	..	ಮೊಕ್ಕಾಂ
12ನೇ	ಶುಕ್ರವಾರ	..	ಕೊಟಗೆಹರದಿಂದ ಕಳಸಕ್ಕೆ ಮಾರ್ಗದಲ್ಲಿ ಮೊಕ್ಕಾಂ
13ನೇ	ಶನಿವಾರ	..	
14ನೇ	ಭಾನುವಾರ	..	
15ನೇ	ಸೋಮವಾರ	..	ಕಳಸ ಮೊಕ್ಕಾಂ
16ನೇ	ಮಂಗಳವಾರ	..	ಕುದರೇ ಮುಖಕ್ಕೆ—ಪುನಃ ಕಳಸಕ್ಕೆ
17ನೇ	ಬುಧವಾರ	..	
18ನೇ	ಗುರುವಾರ	..	
19ನೇ	ಶುಕ್ರವಾರ	..	
20ನೇ	ಶನಿವಾರ	..	ಬಾಳೇಹೊನ್ನೂರು
21ನೇ	ಭಾನುವಾರ	..	ಮೊಕ್ಕಾಂ
22ನೇ	ಸೋಮವಾರ	..	ಅನಿರ್ಗಹಳ್ಳಿ
23ನೇ	ಮಂಗಳವಾರ	..	ಮೊಕ್ಕಾಂ
24ನೇ	ಬುಧವಾರ	..	ಆಲ್‌ದೂರು
25ನೇ	ಗುರುವಾರ	..	ಮೊಕ್ಕಾಂ
26ನೇ	ಶುಕ್ರವಾರ	..	ಚಿಕ್ಕಮುಗಳೂರು
27ನೇ	ಶನಿವಾರ	..	ಮೊಕ್ಕಾಂ
28ನೇ	ಭಾನುವಾರ	..	
29ನೇ	ಸೋಮವಾರ	..	ಬೇಲೂರು
30ನೇ	ಮಂಗಳವಾರ	..	ಮೊಕ್ಕಾಂ
31ನೇ	ಬುಧವಾರ	..	ಬಾಣಾವಾರ

ಜನವರೀ 1891.

1ನೇ	ಗುರುವಾರ	..	ಮೊಕ್ಕಾಂ
2ನೇ	ಶುಕ್ರವಾರ	..	ಗಂಡಸಿ
3ನೇ	ಶನಿವಾರ	..	ಮೊಕ್ತಾಂ
4ನೇ	ಭಾನುವಾರ	..	ಅತ್ತಿಕುಪ್ಪ
5ನೇ	ಸೋಮವಾರ	..	ಮೇಲ್‌ಕೋಟೆ
6ನೇ	ಮಂಗಳವಾರ	..	ಸಾಯಂಕಾಲ ಮೈಸೂರು

2. ಡಿಸ್ಟ್ರಿಕ್ಟ್ ಆಫಿಸರ್‌ಗಳು ಅವರವರ ಡಿಸ್ಟ್ರಿಕ್ಟ್ ಸರಹದ್ದಿನಲ್ಲಿ ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಗೋ ಸ್ಕರ ಇಸ್ತಕಪೂಲ್ ಇರತಕ್ಕದ್ದು.

3. ಪ್ರತಿ ವೊಂದು ಮೊಕ್ಕಾಮಿನಲ್ಲೂ ಬಿಡದೇ ಸ್ಥಳಗಳು, ಬೇಕಾಗಿರುವ ಬಂಡಿಗಳು, ಕೂಲೀ ಜನಗಳು, ಇವುಗಳನ್ನು ಒದಗಿಸುವದಕ್ಕೆ ಬೇಕಾದ ಮೊಬಲಗುಗಳು. ಇವುಗಳ ವಿಷಯವಾಗಿ ಆಲಾಹಿದಾ ಹುಕುಂಗಳು ಸಾದರ್ಮಾಡಲ್ಪಡುವವು.

4. ಸರ್‌ಕ್ಯೂಟ್ ಸವಾರೀ ಕಾಲದಲ್ಲಿ ಪ್ರಜೆಗಳಿಗೆ ಯಾವ ತೊಂದರೆಯೂ, ಅನಾನುಕೂಲತೆಯೂ, ಯಾ ಖರ್ಚು ಬಾಬೂ ಸಂಭವಿಸದಂತೆ ಡಿಸ್ಟ್ರಿಕ್ಟ್ ಆಫಿಸರ್‌ಗಳು ಸಾಧ್ಯವಾದ ಮಟ್ಟಿಗೂ ಜಾಗರೂಕರಾಗಿರತಕ್ಕದ್ದು. ಬೇಕಾಗಿರುವ ಧಾನ್ಯ ಮತ್ತು ಇತರ ಪದಾರ್ಥಗಳು ದೊಡ್ಡ ಮಾರ್ಕೆಟ್‌ಗಳಲ್ಲಿ ಕ್ಯಾಂಪ್ ಸೂಪರ್‌ಟೆಂಡೆಂಟರವರಿಂದ ಕೊಂಡುಕೊಳ್ಳಲ್ಪಡುವದಲ್ಲದೆ ಸರ್‌ಕ್ಯೂಟ್ ಸವಾರಿಯೊಡನೆ ಬಯ್ಯಲ್ಪಟ್ಟು ಕ್ಯಾಂಪ್ ಬಜಾರಿನಲ್ಲಿ ಮಾರಲ್ಪಡುವವು. ಆಯಾ ಸ್ಥಳದಲ್ಲಿಯೇ ಪಡೆಯಬೇಕಾಗಿರುವ ಹಾಲು, ಹುಲ್ಲು, ಕಟ್ಟಿಗೆ ಮೊದಲಾದ ಪದಾರ್ಥಗಳ ಸರಬರಾಯಿ ವಿಷಯದಲ್ಲಿ ಕ್ಯಾಂಪ್ ಸೂಪರ್‌ಟೆಂಡೆಂಟರವರಿಂದ ಆಯಾ ಸ್ಥಳದ ಅಮಲ್‌ದಾರರಿಗೆ ಮುಂದಾಗಿ ನೋಟೀಸ್ ಕೊಡಲ್ಪಡುವದು. ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳ ಕ್ರಯ ಕ್ಯಾಂಪ್ ಸೂಪರ್‌ಟೆಂಡೆಂಟರವರಿಂದ ಆಯಾ ಸ್ಥಳದಲ್ಲೇ ಪಾವತೀ ಮಾಡಲ್ಪಡುವದು ಮತ್ತು ಅಮಲ್‌ದಾರ್‌ರಾಗಲಿ ಯಾ ಇತರ ಸ್ಥಳಿಕ ದೊಡ್ಡ ಹುದ್ದೇದಾರರಾಗಲಿ ಸರಿಯಾದ ಮನುಷ್ಯರಿಗೆ ಯಾವಾಗಲೂ ಹಣ ಪಾವತಿಯಾಗುವಂತೆ ನೋಡಿಕೊಳ್ಳತಕ್ಕದ್ದು.

5. ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರ ಮರ್ಯಾದಾರ್ಥವಾಗಿ ಮೇಳ, ಬಾಣ, ಬಿರುಸು, ಚಪ್ಪರಗಳಿಗೋಸ್ಕರ ಪ್ರಜೆಗಳು ಯಾವ ವಿಧವಾದ ಖರ್ಚುಗಳಿಗೂ ಒಳಪಡದ ಹಾಗೆ ಡಿಸ್ಟ್ರಿಕ್ಟ್ ಆಫಿಸರುಗಳು ತಮ್ಮ ಪ್ರಯತ್ನಗಳನ್ನೆಲ್ಲ ಉಪಯೋಗಿಸು ವರೆಂದು ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರು ನಂಬುತ್ತಾರೆ.

ತಾರೀಖು 6ನೇ ನವಂಬರ್ 1890.

ನಂ. 313.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಈ ಕೆಳಗಿ ನವೊದ್ಯಾಡಲ್ಪಟ್ಟಿರುವ ಅಜ್ಜಂಪೂರ ಮ್ಯುನಿಸಿಪಾಲಿಟಿಯ ಉದ್ದೇಶಿಸಲ್ಪಟ್ಟ ಸರಹದ್ದುಗಳನ್ನು ಗವರ್ಮೆಂಟಿನವರು ಮಂಜೂರ್ಮಾಡಿದ್ದಾರೆ.

ಉತ್ತರ—ಹೊನ್ನೇರಸ್ತೆಯಲ್ಲಿರುವ ಸರ್ವೇ ನಂಬರ್ 106 ಮತ್ತು 111—"ಹಳ್ಳ" ಯೆಂಬ ಸ್ಥಳದ ವರಿವಿಗೂ

ಈಶಾನ್ಯ—ಹೆಬ್ಬೂರ್ ರಸ್ತೆಯಲ್ಲಿ ಸರ್ವೇ ನಂಬರ್ 71 ಮತ್ತು 73

ದಕ್ಷಿಣ—ಬೀರೂರು ರಸ್ತೆಯಲ್ಲಿ ಸರ್ವೇ ನಂಬರ್ 10 ಮತ್ತು 31

ಪೂರ್ವ—ಹೊಸದುರ್ಗದ ರಸ್ತೆಯಲ್ಲಿ ಸರ್ವೇ ನಂಬರ್ 63 ಮತ್ತು 69

ಪಶ್ಚಿಮ—ತರೀಕೆರೇ ರಸ್ತೆಯಲ್ಲಿ ಸರ್ವೇ ನಂಬರ್ 8 ಮತ್ತು 9

ತಾರೀಖು 10ನೇ ನವಂಬರ್ 1890.

ನಂ. 307—ತುಮಕೂರು ಡಿಸ್ಟ್ರಿಕ್ಟು ಮದ್ದಗಿರಿ ತಾಲ್ಲೂಕು ಅಮಲ್ದಾರ್ ಕಾಮಯ್ಯಂಗಾರ್ರಿಗೆ, 1889ನೇ ಇಸವಿ ಫೆಬ್ರವರೀ 5ನೇ ಮರ್ಕುಂ 7140—71—200ನೇ ನಂಬರ್ ಗವರ್ಮೆಂಟ್ ಪ್ರೊಸಿಡಿಂಗ್ಸ್ ನಿಯಮಗಳನುಸರಿಸಿ 5 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 13ನೇ ನವಂಬರ್ 1890.

ಈ ಕೆಳಗೆ ಕಂಡ ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ್‌ಗಳ ವರ್ಗಾವರ್ಗಿಗಳು—ಬದಲಾವಣೆಗಳು ಹುಕ್ಕುಂ ಮಾಡಲ್ಪಟ್ಟಿರುತ್ತವೆ:

1. ಮೆಸ್ಟರ್ ಜೆ. ಜಿ. ನಾರ್ಥ್ ಯವರು ಫ್ರೆಂಚ್‌ರಾಕ್ಸ್ ಸಬ್ ಡಿವಿಜನಿಗೆ ಕೂಡ್ಲೆ ಕೆಲಸದ ಮೇಲೆ ಹೋಗಿ ಕೇರತಕ್ಕದ್ದು.
2. ಮೆಸ್ಟರ್ ವಿ. ಆರ್. ಗೋಪಾಲಯ್ಯಂಗಾರ್ರು ತಮ್ಮ ಕೆಲಸದಚಾರ್ಜನ್ನು ಮೆಸ್ಟರ್ ನಾರ್ಥ್ ಯವರಿಗೆ ಪೊಪ್ಪಿಸಿದ ನಂತರ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ನಿಂದ ಹಾಸನ ಡಿಸ್ಟ್ರಿಕ್ಟಿಗೆ ಕೆಲಸದ ಮೇಲೆ ಹೋಗಿ ಕೇರತಕ್ಕದ್ದು.
3. ಮೆಸ್ಟರ್ ಎಸ್. ನರಸಿಂಹಯ್ಯಂಗಾರ್ರು ಮೆಸ್ಟರ್ ರಾಘವಾಚಾರ್ಲು ಯವರಿಗೆ ಚಾರ್ಜು ಕೊಟ್ಟ ಮೇಲೆ ತುಮಕೂರಿಂದ ಕೋಲಾರ ಡಿಸ್ಟ್ರಿಕ್ಟಿಗೆ ಕೆಲಸದ ಮೇಲೆ ಹೋಗಿ ಕೇರತಕ್ಕದ್ದು.
4. ಮೆಸ್ಟರ್ ಸಿ. ರಾಘವಾಚಾರ್ಲು ಯವರು ಕೋಲಾರದಿಂದ ತುಮಕೂರು ಡಿಸ್ಟ್ರಿಕ್ಟಿಗೆ ಕೂಡ್ಲೆ ಕೆಲಸದ ಮೇಲೆ ಹೋಗಿ ಕೇರತಕ್ಕದ್ದು.

ತಾರೀಖು 15ನೇ ನವಂಬರ್ 1890.

ಕ್ಯಾಂಪ್ ನಂ. 488.—ಬೆಂಗಳೂರು ಡಿಸ್ಟ್ರಿಕ್ಟು ಡಿಪ್ಯೂಟಿ ಕಮ್ಮಿಷನರ್ ಮೆಸ್ಟರ್ ವಿ. ಪಿ. ಮಾಧವರಾಯರವರು, ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಅಡಿಕೇ ತೋಟಗಳ ಸ್ಥಿತಿಯನ್ನ ವಿಚಾರಣೆಯ ಸಂಬಂಧ ಸ್ಪೆಷಲ್ ಡ್ಯೂಟೀಮೇಲೆ ನಿಯಮಿಸಲ್ಪಟ್ಟಿರುತ್ತಾರೆ.

2. ಕ್ಲೋಸ್‌ಪೇಟೇ ಸಬ್ ಡಿವೀಜ್ಯ ಆಫಿಸರ್ ಮೆಸ್ಟರ್ ಸೈಯ್ಯದ್ ನಸಿರುದ್ದೀ ಯವರು, ಮೆಸ್ಟರ್ ಮಾಧವರಾಯರವರು ಇತರ ಕೆಲಸದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತರ ಬೆಂಗಳೂರ್ ಡಿಪ್ಯೂಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ನಿಯಮಿಸಲ್ಪಟ್ಟಿರುತ್ತಾರೆ.

ನಂ. 309.—ಸನ್ 1870ನೇ ಇಸವಿಯ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನ್ನನುಸರಿಸಿ ಇದರಿಂದ ಪ್ರಕಟಿಸಲ್ಪಡುವದೇನೆಂದರೆ:—ಮೈಸೂರು ಟವನಿನಲ್ಲಿರುವ ಇದಕ್ಕೆ ಲಗ್ಗತ್ತು ಆಗಿರುವ ತಖ್ತೆಯಿಲ್ಲಿ ವಿವರಿಸುವಹಾದ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ಮೈಸೂರಲ್ಲಿ ಜಂಕಾನ ಮಾಡುವವರ ಬೀದಿಯಲ್ಲಿ ಬಂದು ಕಾರಂಜೀ ಕಟ್ಟುವದಕ್ಕಾಗಿ ಬೇಕಾಗಿರುತ್ತೆ.

ಪ್ಲಾನ್ ನಂಬರ್.	ಸರ್ವೇ ನಂಬರ್.	ಮಾಲೀಕನ ಹೆಸರು.	ವಿವರಣೆ.	ವಿಸ್ತೀರ್ಣ.		ಚಕ್ಕುಬಂದಿ.
				ಪೂರ್ವ ಪಶ್ಚಿಮಕ್ಕೆ.	ಉತ್ತರ ದಕ್ಷಿಣಕ್ಕೆ.	
				ಅಡಿ.	ಅಡಿ.	
1	1	ಮಿರ್ಜಾ ಕಂಬಾರಲ್ಲಿ	ಭೂಮಿ	35	22	ಪೂರ್ವ—ಮಿರ್ಜಾಕಂಬಾರಲ್ಲಿಯಮನೆ ಪಶ್ಚಿಮ—ಸರಕಾರ್ ಭೂಮಿ ಉತ್ತರ—ಮಿರ್ಜಾ ಕಂಬಾರಲ್ಲಿಯ ಆಪೂರ್‌ಖಾನ ದಕ್ಷಿಣ—ಜಂಖಾನ ಮಾಡುವವರಬೀದಿ

783

ತಾರೀಖು 21ನೇ ಅಕ್ಟೋಬರ್ 1890.

ನಂ. 308.—ಸಕ್ 1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ ನಿಯಮಗಳನುಸರಿಸಿ ಇದಕ್ಕೆ ಲಗತ್ತಾಗಿರುವ ತಖ್ತೆಯಲ್ಲಿ ವಿವರಿಸೋಣಾದ ಜಮೀನ್‌ಗಳು ಸರ್ಕಾರ್ ಕೆಲಸಕ್ಕಾಗಿ ಅಂದರೆ ಬೆಂಗಳೂರು ಸಿಟೀ ಮ್ಯುನಿಸಿಪಾಲಿಟಿಯ I, IIನೇ ನಂಬರ್ ಡಿವಿಜ್‌ಗಳಲ್ಲಿ ಹೊಸ ವ್ಯೋಣೆಗಳು ವಿಸ್ತರಿಸುವದಕ್ಕೆ ಬೇಕಾಗಿರುತ್ತೆ:—

ನಂಬರ್.	ಸ್ಥಳ.	ಮಾಲೀಕನ ಹೆಸರು.	ವಿಸ್ತೀರ್ಣ. ಉದ್ದ ಪ್ರತಿ ಪಟ್ಟಿ	ವಿಸ್ತೀರ್ಣ. ಅಗಲ ಪ್ರತಿ ಪಟ್ಟಿ	ಸ್ವತ್ತಿನ ವಿವರ.	ಚಹಸ್ಕ್ಕು ಬಂದಿ.
1	Iನೇ ನಂ. ಡಿವಿಜ್ ದರ್ಜೀಪೇಟೆ	ಅನಂತಯ್ಯ	9′ 5½′ 3′	45′ 30′ 30′	ಖಾಲೀ ಜಮೀನ್ 23½ ಅಡಿಯುಳ್ಳ ಕಂಪೌಂಡ್ ಗೋಡೆ ಮಂಣುಮಾಳಿಗೆ ಕಟ್ಟಣ	ಉತ್ತರಕ್ಕೆ—ದರ್ಜೀಪೇಟೆಯ ರಾಜ ಬೀದಿ ದಕ್ಷಿಣಕ್ಕೆ—ಕಾಶೀನರಸಪ್ಪನ ಮನೆ ಮತ್ತು ಜನಗಳು ತಿರಗಾಡುವ ವ್ಯೋಣಿ ಪೂರ್ವಕ್ಕೆ—ನರಸಿಂಗರಾಯರ ಮನೆ ಪಶ್ಚಿಮಕ್ಕೆ—ಕೃಷ್ಣಪ್ಪನ ಮನೆ ಮತ್ತು ಜನಗಳು ತಿರಗಾಡುವ ವ್ಯೋಣಿ
2	ಡಿಟೋ	ಕಾಶೀ ನರಸಪ್ಪ	9°	34¾′	ಖಾಲೀ ಜಮೀನ್ ಮತ್ತು ಮೇಲ್ ಭಾಗದಲ್ಲಿ ಕಲ್ಲು ಕಟ್ಟಡದ ಚಿಕ್ಕ ಭಾವಿ ಪಂದು	ಉತ್ತರಕ್ಕೆ—ಅನಂತಯ್ಯನ ಮನೆ ದಕ್ಷಿಣ ಮತ್ತು ಪೂರ್ವಕ್ಕೆ—ನರಸಿಂಗರಾಯರ ಮನೆ ಪಶ್ಚಿಮಕ್ಕೆ—ಮುನಿಯಪ್ಪನ ಮತ್ತು ತೆಲುಗರ ನಾರಾಯಣಸಾಮಿಯ ಮನೆ
3	ಡಿಟೋ	ನರಸಿಂಗರಾವ್	16½′	35½′	ಮಂಣುಮಾಳಿಗೇ ಕಟ್ಟಣ	ಉತ್ತರಕ್ಕೆ—ಕಾಶೀನಾರಣಪ್ಪನ ಮನೆ ದಕ್ಷಿಣಕ್ಕೆ—ಮಂಡೀ ಸುಬ್ಬನ ಮನೆ ಮತ್ತು ಓಣಿ ಪೂರ್ವಕ್ಕೆ—ಅರ್ಗೆಕಟ್ಟ ತೆಲಗರ್ ಅಣ್ಣಪ್ಪನ ಮನೆ ಪಶ್ಚಿಮಕ್ಕೆ—ತೆಲಗರ ನಾರಣಪ್ಪನ ಮನೆ
4	ಕಾಶೀವಿಶ್ವೇರಗುಡೀ ಹತ್ತರ IIನೇ ನಂ. ಡಿವಿಜ್	ಬೈರಾಗೀಮಠ	36½′	70′	ಖಾಲೀ ಜಮೀನ್ ಒಂದು ಭಾವಿ	ಉತ್ತರಕ್ಕೆ—ಮ್ಯುನಿಸಿಪಾಲಿಟಿಗೆ ಕೇರಿದ ಖಾಲಿ ಜಮೀನ್ ದಕ್ಷಿಣಕ್ಕೆ—ಮೆಸ್ಸರ್ ರಂಗಸ್ವಾಮಯ್ಯಂಗಾರ್ರ ಮನೆ ಪೂರ್ವಕ್ಕೆ—ಎಸ್. ಶ್ರೀನಿವಾಸಯ್ಯಂಗಾರ್ರ ಮನೆ ಪಶ್ಚಿಮಕ್ಕೆ—ಬೈರಾಗೀ ಮಠ
5	ಡಿಟೋ	ಮೆಸ್ಸರ್ ರಂಗಸ್ವಾಮಯ್ಯಂಗಾರ್	25′	12½′	ಖಾಲೀ ಜಮೀನ್ 50 ಅಡಿ ಕಲ್ಲು ಗೋಡೆ	ಉತ್ತರಕ್ಕೆ—ಮಠದ ಖಾಲೀ ಜಮೀನ್ ದಕ್ಷಿಣಕ್ಕೆ ಈರಂಣನ ಮನೆ ಪೂರ್ವಕ್ಕೆ—ಶೇಷಗಿರಿರಾಯರ ಮನೆ ಪಶ್ಚಿಮಕ್ಕೆ—ಕಟ್ಟಣ
6	ಡಿಟೋ	1 ಈರಮ್ಮ (ವಾಸನ್ಯಳು)	27′	21½′	ಮಂಣುಮಾಳಿಗೇ ಕಟ್ಟಣ	ಉತ್ತರಕ್ಕೆ ಮತ್ತು ಪಶ್ಚಿಮಕ್ಕೆ ಮೇಸ್ಸರ್ ರಂಗಸ್ವಾಮಯ್ಯಂಗಾರ್ರ ಮನೆ ಪೂರ್ವಕ್ಕೆ—ಶೇಷಗಿರಿರಾಯರ ಮನೆ ದಕ್ಷಿಣಕ್ಕೆ—ಅಡ್ಡ ಓಣಿ
		2 ವೆಂಕಟದಾಪ್ಪ (ಈ ಯದಾರನು)	31½′	12′	ಡಿಟೋ	
		3 ವೃತಪಟ್ಟ ಕುದೂರ ಪುಟ್ಟಣ್ಣ (ಭೋಗ್ಯದಾರ)	35′	5½′	ಖಾಲೀ ಜಮೀನ್	
		4 ಚೌಬೀನೇ ಪುಟ್ಟುಂಣ (ಭೋಗ್ಯದಾರ ಮತ್ತು 3—4ನೇ ಯವರಿಗೆ ಕೈಯಕ್ಕೆ ಕೊಟ್ಟವನು)	7½′	19′	ಡಿಟೋ	

ಪರಾ—ಇದರ ನಕ್ಷೆಗಳನ್ನು ಅಪ್ಪಿಕೇಷನ್ ಮೂಲಕ ಬೆಂಗಳೂರು ಮ್ಯುನಿಸಿಪಲ್ ಆಫಿಸಿನಲ್ಲಿ ನೋಡಬಹುದು.

ತಾರೀಖು 17ನೇ ನವಂಬರ್ 1890.

ನಂ. 310.—ಸ್ಯ 1889ನೇ ಇಸವಿ ಫೆಬ್ರವರೀ 5ನೇ ಮುರ್ಕುಮಿನ 7140—71 ಸರ್ಕುಲರ್ 200ನೇ ನಂಬರ್ ಪ್ರೊಸೀಡಿಂಗ್ಸಿನಲ್ಲಿ ಫಾಯಿಷ್ಮಾಡಲ್ಪಟ್ಟ ಪರಿಷ್ಕರಿಸುವಣವಾದ 1ನೇ ರೂಲಿನ ನಿಯಮಗಳನುಸರಿಸಿ, ಚಿತ್ರದುರ್ಗದ ಡಿಸ್ಟ್ರಿಕ್ಟು ಆಕ್ಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ಮಿ.ಸ್ಪರ್ ಚಂಗಯ್ಯಶೆಟ್ಟಿಯವರಿಗೆ, 1890ನೇ ಇಸವಿ 10ನೇ ತಾರೀಖು ಲಾಗಾಯತು 15ನೇ ಮುರ್ಕುಮಿನ ವರಿವಿಗೆ ವುಭಯ ದಿವಸಗಳೂ ಸೇರಿ 6 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 497.—ಶ್ರೀಮ್ಮ ಮಹಾರಾಜ ರಾಜಾಸಾಹೆಬ್ ಬಹದೂರವರು ಮತ್ತು ಪರಿವಾರವೂ ಮೈಸೂರು, ಹಾಸನ, ಕಡೂರು ಡಿಸ್ಟ್ರಿಕ್ಟುಗಳಲ್ಲಿ ಸರ್ಕ್ಯೂಟ್ ಸವಾರೀ ಚಿತ್ತೈಸುವರೆಂದು ಪ್ರಕಟಿಸುವ 1890ನೇ ಇಸವಿ ನವಂಬರ್ 12ನೇ ಮುರ್ಕುಂ ಕ್ಯಾಂಪ್ 464ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶ್ರೀಮ್ಮ ಮಹಾರಾಜ ರಾಜಾಸಾಹೆಬ್ ಬಹದೂರವರಿಗೂ ಮತ್ತು ಪರಿವಾರಕ್ಕೂ ಸಹ ಉದ್ದೇಶಿಸಲ್ಪಟ್ಟ ಲೆಟರುಗಳು ಮತ್ತು ಬಸ್ತುಗಳ ಮೇಲೆ ಯಾವ ಸ್ಥಳವನ್ನೂ ನಮೂದ್ ಮಾಡದೆ "ಶ್ರೀಮ್ಮ ಮಹಾರಾಜ ರಾಜಾಸಾಹೆಬ್ ಬಹದೂರವರ ಕ್ಯಾಂಪಿಗೆ" ಎಂದು ವಿಳಾಸ ಬರೆಯತಕ್ಕದ್ದು.

ತಾರೀಖು 18ನೇ ನವಂಬರ್ 1890.

ನಂ. 311—ಶ್ರೀರಂಗಪಟ್ಟಣದ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಚಿನ್ನತಂಬಿ ಮೊದಲಿಯಾರ್ ಸ್ಯ 1890ನೇ ಇಸವಿ ಅಕ್ಟೋಬರ್ 15ನೇ ಯುರ್ಕುಂ 294ನೇ ನಂಬರ್ ನೋಟಿಫಿಕೇಷನ್ನಲ್ಲಿ ಪಡಕೊಂಡಿದ್ದ 22 ದಿವಸಗಳ ರಜಾ ಪೈಕಿ 15 ದಿವಸಗಳು ಮಾತ್ರ ವುಪಯೋಗಿಸಿಕೊಂಡಿರುತ್ತಾರಾಗಿ ವುಳಿದ 7 ದಿವಸಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 312—ತುಮಕೂರು ಡಿಸ್ಟ್ರಿಕ್ಟು ತುರುವೇಕೆರೆ ಡೆಪ್ಯುಟಿ ಅಮಲ್ದಾರ್ ಮಹಮ್ಮದ್ ಅಲ್ಲೀಖಾನರು ಸ್ಯ 1890ನೇ ಇಸವಿ ಅಕ್ಟೋಬರ್ 16ನೇ ಮುರ್ಕುಂ 296ನೇ ನಂಬರ್ ನೋಟಿಫಿಕೇಷನ್ನಲ್ಲಿ ಅವರಿಗೆ ಕೊಡಲ್ಪಟ್ಟ 3 ತಿಂಗಳು 22 ದಿವಸಗಳ ರಜಾದಿಂದ ಸ್ಯ 1890ನೇ ಅಕ್ಟೋಬರ್ 23ನೇ ಮುರ್ಕುಮಿನಲ್ಲಿ ಕೆಲಸದ ಮೇಲೆ ಹಾಜರಾಗಿರುತ್ತಾರಾಗಿ, ವುಳಿದ 4 ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ರೂಲ್.

ಮೈಸೂರು ಗೆಜೆಟ್ಟಿಗೆ ಚಂದಾ ಹಣವನ್ನು ಪಾವತಿಮಾಡತಕ್ಕ ವಿಷಯದಲ್ಲಿ ಹಾಲೀ ಜಾರೀ ಯಿರುವ ನಡವಳಿಕೆಯನ್ನ ರದ್ದು ಮಾಡಿ ಇದರಡಿ ಬರುವ ನಿಬಂಧನೆಯನ್ನು ವಿಧಿಸೋಣಾಗಿರುತ್ತೆ.

ಯಿಳ್ಳೆವುಳ್ಳ ಚಂದಾದಾರರು, ಅವರ ಚಂದಾ ಮೊಬಲಗನ್ನು ಅತ್ಯಂತ ಸಮೀಪವಾದ ತಾಲ್ಲೂಕು ಖಜಾನೆಗೆ ಪಾವತಿ ಮಾಡಬೇಕು.

ಅಮಲ್ದಾರರು ಹಾಂಗೆ ಪಾವತಿ ಮಾಡೋಣಾದ ಮೊಬಲಗಿಗೆ, ಟ್ರೆಜರಿಗೆ ಬಂದ ಮೊಬಲಗಿಗಾಗಿ ಕೊಡುವ ವಾಡಿಕೆಯಾದ ಅಚ್ಚಿನ ನಮೂನೆಯಲ್ಲಿ ದ್ವಿಪ್ರತಿ ರೀತಿಯನ್ನ ತಯಾರ್ಮಾಡಿ ಕೊಡತಕ್ಕದ್ದು.

ಚಂದಾದಾರನು ಡ್ಯೂಪ್ಲಿಕೇಟ್ ರೀತಿಯನ್ನು ತನ್ನಲ್ಲಿ ಯಿಟ್ಟುಕೊಂಡು, ಒರಿಜಿನಲ್ ರೀತಿಯನ್ನು ತನ್ನ ದರಖಾಸ್ತಿನ ಸಂಗಡ ಮೈಸೂರು ಗೆಜೆಟ್ ಕಂಪೈಲರವರಿಗೆ ಕಳುಹಿಸತಕ್ಕದ್ದು.

ಕಂಪೈಲರವರು ಟ್ರೆಜರೀ ರೀತಿಯನ್ನು ಹಣಬಂದಂತೆ ಬಿಪ್ಪಿಸಿಕೊಳ್ಳುವರು.

ತಾರೀಖು 21ನೇ ಡಿಸಂಬರ್ 1888.

ಕಾರ್ಯಾರ್ಥ ದಿವಾನರವರನ್ನು ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರಿಟೆರಿಯವರಿಗೆ ತಮ್ಮ ಕಾರ್ಡಿಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫಿಸಿನಲ್ಲಿ ಯಿಡಲ್ಪಟ್ಟಿರುವ ಅರ್ಜೀಪೆಟ್ಟಿಗೆಯು ದಿನವಹೀ ಚೀಫ್ ಸೆಕ್ರಿಟೆರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸಕ್ರಿಟೆರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ತೆಗದುಕೊಳ್ಳಲ್ಪಡುವವು.

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಹುಕುಂ ಬನೋಜೀಜ್,
ಟಿ. ಆನಂದರಾವ್,
ಚೀಫ್ ಸೆಕ್ರಿಟೆರಿ.